# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 147 |
| ಸದಸ್ಯರ ಹೆಸರು | : | ಶ್ರೀ.ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.02.2022 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಶುಸಂಗೋಪನೆ ಇಲಾಖೆಯಲ್ಲಿ ಕೊರತೆಯಿರುವ ಪಶು ತಜ್ಞ ವೈದ್ಯರ ಹಾಗೂ ವೈದ್ಯರ ಸಂಖ್ಯೆ ಎಷ್ಟು; | ಪಶುಸಂಗೋಪನೆ ಇಲಾಖೆಯಲ್ಲಿ 45 ತಜ್ಞ ಪಶುವೈದ್ಯರ ಕೊರತೆ ಹಾಗೂ 882 ಪಶುವೈದ್ಯರ ಕೊರತೆ ಇರುತ್ತದೆ. |
| ಆ) | ಸದರಿ ಹುದ್ದೆಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾಗಿ ವಿವರ ಮಾಹಿತಿ ನೀಡುವುದು) | ಮಂಜೂರಾದ ಹುದ್ದೆಗಳ ಸಂಖ್ಯೆ<br>1. ತಜ್ಞ ಪಶುವೈದ್ಯರ ಸಂಖ್ಯೆ:90<br>➢ ಮುಖ್ಯ ಪಶುವೈದ್ಯಾಧಿಕಾರಿ – 30<br>➢ ಹಿರಿಯ ಪಶುವೈದ್ಯಾಧಿಕಾರಿ–30<br>➢ ಪಶುವೈದ್ಯಾಧಿಕಾರಿ– 30<br>2. ಪಶುವೈದ್ಯರ ಸಂಖ್ಯೆ :1572 |
| ಇ) | ಸದರಿ ಹುದ್ದೆಗಳನ್ನು ಧೀರ್ಘ ಕಾಲದಿಂದ ಭರ್ತಿ ಮಾಡದಿರಲು ಕಾರಣಗಳೇನು; | ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯಿಂದ ಅನುಮತಿ ದೊರೆಯಲು ವಿಳಂಬವಾದ ಪ್ರಯುಕ್ತ ಹುದ್ದೆಗಳ ಭರ್ತಿ ವಿಳಂಬವಾಗಿರುತ್ತದೆ. |
| ಈ) | ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | 2021-22 ನೇ ಸಾಲಿನಲ್ಲಿ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳಿಯ ವೃಂದದ ಪಶುವೈದ್ಯಾಧಿಕಾರಿ ಹುದ್ದೆಗೆ 3 ಬಾರಿ ನೇಮಕಾತಿ ಮಾಡಲಾಗಿದ್ದು ಒಟ್ಟು 106 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ.<br>ಕಲ್ಯಾಣ-ಕರ್ನಾಟಕ ಪ್ರದೇಶ ಹೊರತು ಪಡಿಸಿದಂತೆ, 400 ಪಶುವೈದ್ಯಾಧಿಕಾರಿಗಳನ್ನು ಮಾತ್ರ ವೃಂದದಲ್ಲಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದ್ದು, ವಿಶೇಷ ನೇಮಕಾತಿ ನಿಯಮ ರಚನೆಯ ಪ್ರಕ್ರಿಯೆ ಚಾಲ್ತಿಯಲ್ಲಿದೆ. |
| ಉ) | ಯಾವ ಕಾಲಮಿತಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ? | ಆಯ್ಕೆ ಪ್ರಕ್ರಿಯೆ ಆದನಂತರ ಡಿಸೆಂಬರ್-2022 ರೊಳಗೆ ಭರ್ತಿ ಮಾಡಲಾಗುವುದು |

ಸಂ: ಪಸಂಮೀ ಇ-13 ಪಸಸೇ 2022

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು